# ಗಡ್ಡ ಮೀಮಾಂಸೆ!

ಗಡ್ಡದಲ್ಲಿ ಹಲವು ವಿಧ. ಅವರವರ ಮುಖದ ಆಕಾರಕ್ಕೆ ಅನುಗುಣವಾಗಿ ಗಡ್ಡವನ್ನು ಟ್ರಿಮ್ ಮಾಡಿಸಿಕೊಳ್ಳಬಹುದು.

## ನೀಳ, ಗಾಢ ಗಡ್ಡ

ನೀಳವಾಗಿ ದಪ್ಪ ಗಡ್ಡ ಬಿಡುವುದು ಈಗಿನ ಹೊಸ ಟ್ರೆಂಡ್. ಹೆಚ್ಚಿನ ಸೆಲೆಬ್ರಿಟಿಗಳು ಈ ಮಾದರಿಯ ಗಡ್ಡ ವಿನ್ಯಾಸ ಮಾಡಿಕೊಳ್ಳುತ್ತಾರೆ. ಕೆ.ಜಿ.ಎಫ್ ಸಿನಿಮಾದಲ್ಲಿ ಯಶ್ ಇದೇ ಮಾದರಿಯ ಗಡ್ಡ ವಿನ್ಯಾಸ ಮಾಡಿಸಿದ್ದರು. ಈ ಮಾದರಿಯ ಗಡ್ಡ ನಿಮ್ಮ ವ್ಯಕ್ತಿತ್ವಕ್ಕೆ ವಿಶೇಷ ಮೆರುಗನ್ನು ನೀಡುತ್ತದೆ. ಎಲ್ಲಾ ಮಾದರಿಯ ಮುಖಗಳಿಗೂ ಈ ವಿನ್ಯಾಸ ಹೊಂದುತ್ತದೆ.



## ಟೇಪರ್ ಗಡ್ಡ

ಚರ್ಮದ ಬಣ್ಣ ಮಾಸುವ ಸಮಸ್ಯೆ ಇರುವವರಿಗೆ ಈ ಶೈಲಿ ಒಳ್ಳೆಯ ಆಯ್ಕೆ. ಚರ್ಮದ ಬಣ್ಣ ಮಾಸಿದವರು ಕ್ಲೀನ್ ಶೇವ್ ಮಾಡಿದರೆ ಮುಖದ ಅಂದ ಹಾಳಾಗಬಹುದು. ಗಲ್ಲದ ಬಳಿ ಮೊನಚಾದ ವಿನ್ಯಾಸ ಮಾಡಿ, ಶೂನ್ಯಕ್ಕೆ ಟ್ರಿಮ್ ಮಾಡಿದರೆ ಆಕರ್ಷಕವಾಗಿ ಗೋಚರಿಸುತ್ತದೆ. ಇದು ಅಗಲವಾದ ಮುಖದ ಆಕಾರಗಳಿಗೆ ಸೂಕ್ತವಾದ ಶೈಲಿ. ಇದು ಮುಖವನ್ನು ಕಿರಿದಾಗಿ ಕಾಣುವಂತೆ ಮಾಡುತ್ತದೆ. ವಾರಕ್ಕೊಮ್ಮೆ ಈ ಶೈಲಿಯಲ್ಲಿ ಕತ್ತರಿಸಿದರೆ ಮುಖ ಒಪ್ಪವಾಗಿ ಕಾಣುತ್ತದೆ.

## ಟ್ರಿಮ್ ಗಡ್ಡ

ಮೀಸೆಯನ್ನು ಗಾಢವಾಗಿ ಹಾಗೂ ಗಡ್ಡವನ್ನು ಕುರುಚಲಾಗಿ ಬಿಡುವ ವಿನ್ಯಾಸ ಇದು. ಮೀಸೆಯನ್ನು ಎದ್ದು ಕಾಣಿಸುವಂತೆ ಇರಿಸಿ, ಗಡ್ಡವನ್ನು ಸಣ್ಣದಾಗಿ ಟ್ರಿಮ್ ಮಾಡಬೇಕು. ಇದು ವಿಶಿಷ್ಟ ಹಾಗೂ ಸಮತೋಲಿತ ಲುಕ್ ನೀಡುತ್ತದೆ. ಮೀಸೆಯನ್ನು ಉದ್ದಕ್ಕೆ ಬಿಟ್ಟು ತುಟಿ ರೇಖೆ ಬಳಿ ಮಾತ್ರ ಕತ್ತರಿಸಬೇಕು. ಸಣ್ಣ ಗಡ್ಡವನ್ನು ಕಾಪಾಡಿಕೊಳ್ಳಲು ಟ್ರಿಮ್ಮರ್ ಬಳಸಬೇಕು, ಮೀಸೆಯನ್ನು ಒಪ್ಪವಾಗಿಡಲು ಬಾಚಣಿಗೆ ಬಳಸಬೇಕು.

## ಸರ್ಕಲ್/ಫ್ರೆಂಚ್ ಗಡ್ಡ

ಹೆಚ್ಚು ಪ್ರೊಫೆಷನಲ್ ಆಗಿ ಕಾಣಬೇಕೆಂದು ಬಯಸುವವರು ಈ ವಿನ್ಯಾಸವನ್ನು ಆಯ್ದುಕೊಳ್ಳಬಹುದು. ಬಾಯಿಯ ಸುತ್ತಲೂ ವೃತ್ತಾಕಾರದಲ್ಲಿ ಗಡ್ಡ ಹಾಗೂ ಮೀಸೆಯನ್ನು 'ಕೆತ್ತ'ಬೇಕು. ಇದು ಮುಖಕ್ಕೆ ಹೆಚ್ಚು ಸಮತೋಲಿತ, ರಚನಾತ್ಮಕ ನೋಟವನ್ನು ನೀಡುತ್ತದೆ. ಇದು ಯಾವುದೇ ಮುಖದ ಆಕಾರಕ್ಕೆ ಸರಿಹೊಂದುತ್ತದೆ. ಬಾಯಿಯ ಸುತ್ತಲೂ ದುಂಡಗಿನ ಆಕಾರವನ್ನು ರಚಿಸಿ ಮೀಸೆಯ ಅಂಚುಗಳನ್ನು ಟ್ರಿಮ್ ಮಾಡಬೇಕು. ಫಾರ್ಮಲ್ ಬಟ್ಟೆಗಳಿಗೆ ಇದು ಸೂಕ್ತವಾಗಿ ಹೊಂದುತ್ತದೆ. ಬೋಳು ತಲೆಯವರಿಗೆ ಸೂಕ್ತವಾದ ಶೈಲಿ ಇದು.



ಎಂಬುದು ಗೊತ್ತಾಗುತ್ತದೆ.

ಮದುವೆಗಾಗಿಯೇ ಗಡ್ಡ ಬಿಡಬೇಕು ಅಂದುಕೊಂಡವರು ಮಾರುಕಟ್ಟೆಯಲ್ಲಿ ಸಿಗುವ ಬಿಯರ್ಡ್ ಗ್ರೋತ್ ಆಯಿಲ್ ಹಚ್ಚಬಹುದು. ಗಡ್ಡ ಉಳ್ಳವರೂ ಅಗತ್ಯಕ್ಕೆ ತಕ್ಕಂತೆ ಇದನ್ನು ಬಳಸಬಹುದು.

ಗಡ್ಡವು ಒರಟಾಗದಂತೆ ಮೃದುವಾಗಿರಲು ಬಿಯರ್ಡ್ ಬಾಮ್ ಲೇಪನ ಮಾಡಹುದು. ಗಡ್ಡವನ್ನು ಸುಸ್ಥಿತಿಯಲ್ಲಿಡುವ ಆಯಿಲ್‌ಗಳು ಸಹ ಲಭ್ಯ ಇವೆ. ಗಡ್ಡವನ್ನು ಆಗಾಗ ಬಾಚಣಿಗೆಯಿಂದ ಬಾಚಿಕೊಳ್ಳುವುದು, ಸಣ್ಣ ಕತ್ತರಿ ಅಥವಾ ಟ್ರಿಮ್ಮರ್ ನಂಬರ್ ಆಧರಿಸಿ ಶೇಪ್ ಮೂಡಿಸಿಕೊಳ್ಳುವುದು ಅಗತ್ಯ.

ಗಡ್ಡವು ಮೃದುವಾಗಿರಬೇಕಾದರೆ ಸ್ವಚ್ಛತೆ ಕಾಪಾಡಿಕೊಳ್ಳುವುದು ಬಹುಮುಖ್ಯ. ಅದಕ್ಕಾಗಿ ಬಿಯರ್ಡ್ ವಾಶ್‌ಗಳನ್ನು ಬಳಸಿ, ಸ್ವಚ್ಛಗೊಳಿಸಿಕೊಳ್ಳಬೇಕು. ಇದು ನಿತ್ಯದ ಪ್ರಕ್ರಿಯೆಯಾದರೆ, ವಾರಕ್ಕೆ ಕನಿಷ್ಠ ಮೂರು ಬಾರಿಯಾದರೂ ಶಾಂಪೂವಿನಿಂದ ಗಡ್ಡ ತೊಳೆದುಕೊಳ್ಳಬೇಕು. ಡೆಡ್ ಸ್ಕಿನ್, ಗಟ್ಟಿಯಲ್ಲದ ಕೂದಲುಗಳನ್ನು ತೆಗೆಯಲು ನಿರ್ದಿಷ್ಟ ಮಾದರಿಯ ಬ್ರಶ್‌ಗಳೂ ಮಾರುಕಟ್ಟೆಯಲ್ಲಿ ಲಭ್ಯ ಇವೆ.

ಗಡ್ಡವನ್ನು ಶಾಂಪೂವಿನಿಂದ ಸ್ವಚ್ಛವಾಗಿ ತೊಳೆದುಕೊಂಡಾಗ ಅಥವಾ ಸ್ನಾನವಾದ ಮೇಲೆ ಹೇರ್ ಡ್ರೈಯರ್ ಬಳಸಿ, ಗಡ್ಡವನ್ನೂ ಆರಿಸಿಕೊಳ್ಳಬೇಕು. ಟವೆಲ್ ಅಥವಾ ಬಟ್ಟೆಯಿಂದ ಗಡ್ಡವನ್ನು ಒರೆಸುವಾಗಲೂ ತಾಳ್ಮೆ ಬೇಕು. ಗಡ್ಡಕ್ಕಾಗಿಯೇ ಇರುವ ತೈಲ, ಬಾಮ್, ಬ್ರಷ್, ಸಾಫ್ಟ್‌ನರ್ ಮೊದಲಾದವುಗಳನ್ನು ಬಳಸುವುದರಿಂದ ಗಡ್ಡ ಒತ್ತೊತ್ತಾಗಿ, ಚೆಂದವಾಗಿ, ವಿನ್ಯಾಸಕ್ಕೆ ತಕ್ಕಂತೆ, ಸೌಂದರ್ಯ ಇಮ್ಮಡಿಗೊಳಿಸುವಂತೆ ಕಾಣಿಸುತ್ತದೆ. ಈ ಉತ್ಪನ್ನಗಳನ್ನು ಬಳಸುವಾಗ ಉತ್ತಮವಾದುದು ಯಾವುದೆಂದು ಆನ್‌ಲೈನ್‌ಗಳಲ್ಲಿ ಪರಿಶೀಲಿಸಿ, ತಜ್ಞರ ಸಲಹೆ ಪಡೆಯುವುದು ಉತ್ತಮ.

ಗಡ್ಡವನ್ನು ಯೋಜನೆಯಂತೆ ಬೆಳೆಸಿ, ಉತ್ತಮ ರೀತಿಯಲ್ಲಿ ನಿಭಾಯಿಸಿ, ಅದಕ್ಕೊಂದು ವಿನ್ಯಾಸ ಕೊಡುವುದು ಎಷ್ಟು ಮುಖ್ಯವೋ, ಅದರ ಬಣ್ಣ ನಿರ್ಧರಿಸುವುದೂ ಅಷ್ಟೇ ಮುಖ್ಯವಾಗುತ್ತದೆ. ಗಡ್ಡದ ನಡುವೆ ಬಿಳಿಯ ಕೂದಲುಗಳಿದ್ದರೆ ಡೈ ಬಳಸಬೇಕಾಗುತ್ತದೆ.

ಗಡ್ಡದ ಮಧ್ಯೆ ಬಿಳಿ ಕೂದಲು ಬಿಟ್ಟು, ಸುತ್ತ ಕಪ್ಪು ಬಣ್ಣದಿಂದ ಕೂಡಿದ್ದರೆ ಅದೂ ವಿಶೇಷ ಅನಿಸುತ್ತದೆ. ಬಂಗಾರದ ಬಣ್ಣ, ಕಂದು ಬಣ್ಣ, ಕೆಂಪಗೆ ಮಾತ್ರವಲ್ಲದೆ ವರ್ಣಮಯ ಕೂಡ ಮಾಡಿಕೊಳ್ಳಬಹುದು. ಇದು ನಿಮ್ಮ ಆಯ್ಕೆ.